2019 ಕ.ತೀ.ವ 1458

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್

## ಶ್ರೀಮತಿ ಗೌರಮ್ಮ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*

ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 15ನೇ ಪ್ರಕರಣ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (ಸಂಕ್ಷಿಪ್ತವಾಗಿ 'ಅಧಿನಿಯಮ') 15ನೇ ಪ್ರಕರಣದಡಿ ಚುನಾವಣಾ ಅರ್ಜಿಯಲ್ಲಿ ಗ್ರಾಮ ಪಂಚಾಯತಿ ಸದಸ್ಯರೊಬ್ಬರ ಆಯ್ಕೆಯನ್ನು ಪ್ರಶ್ನಿಸಿದ್ದು, ಚುನಾವಣಾ ಅರ್ಜಿಯ ಬಗ್ಗೆ ವ್ಯವಹರಿಸುವಾಗ ಸಿವಿಲ್ ನ್ಯಾಯಾಧೀಶರೆಂದರೆ (ಕಿರಿಯ ವಿಭಾಗ) ನಿಯುಕ್ತ ವ್ಯಕ್ತಿಯೆ? ಅಥವಾ ಸಿವಿಲ್ ನ್ಯಾಯಾಲಯವೆ? ಸಿವಿಲ್ ನ್ಯಾಯಾಧೀಶರು ಸಿವಿಲ್ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತವಾಗಿ 'ಸಂಹಿತೆ') 39ನೇ ಕ್ರಮಾದೇಶದ 1 ಮತ್ತು 2ನೇ ನಿಯಮದಡಿ ಅಧಿಕಾರವನ್ನು ಹೊಂದಿದ್ದಾರೆಯೇ? ಅಥವಾ ಇಲ್ಲವೆ? ಎಂಬುದಾಗಿ ಈ ನ್ಯಾಯಾಲಯದ ಮುಂದೆ ಎರಡು ಚರ್ಚಾಸ್ಪದ ಪ್ರಶ್ನೆಗಳಿವೆ.

ಮಲ್ಲೇಶಪ್ಪ –ವಿರುದ್ಧ– ರೇವಣ ಸಿದ್ದಪ್ಪ ಮತ್ತು ಇತರರು, 1969 ಐಎಲ್‌ಆರ್, ಎಂಪೈಎಸ್ 734 ಪ್ರಕರಣದಿಂದ, ವಿನಯ್‌ಕುಮಾರ್ ಸೂರಿಂಜೆ ಮತ್ತು ಇನ್ನೊಬ್ಬರು –ವಿರುದ್ಧ– ರಿಟರ್ನಿಂಗ್ ಅಧಿಕಾರಿ/ತಹಸೀಲ್ದಾರ್ ಮತ್ತು ಇತರರು [2005(6) ಕೆಎಆರ್ ಎಲ್.ಜೆ.484] ವರೆಗೆ ಭೈರಗೌಡ ಸನ್/ಆಫ್ ಬಾಲಗೌಡ ಪಾಟೀಲ್ –ವಿರುದ್ಧ– ಸುಧೀರ್ ನಾಗೇಶ್ ಗಡ್ಲೆ, ರಿಟ್ ಅರ್ಜಿ ಸಂಖ್ಯೆ:82245/2013 ದಿನಾಂಕ 31–7–2014 ಪ್ರಕರಣದವರೆಗೆ, ಈ ನ್ಯಾಯಾಲಯವು "ಅಧಿನಿಯಮದಡಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಧೀಶರು(ಮುನ್ಸಿಫ್) ಒಂದು ನ್ಯಾಯಾಲಯವಲ್ಲ. ಆದರೆ,

*ರಿಟ್ ಅರ್ಜಿ ಸಂಖ್ಯೆ: 29380/2015, ದಿನಾಂಕ 21ನೇ ಸೆಪ್ಟೆಂಬರ್, 2018.

ನಿಯುಕ್ತ ವ್ಯಕ್ತಿಯಾಗಿದ್ದಾರೆ ಮತ್ತು ಅದರಂತೆ, ಅವರು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಅನುಭೋಗಿಸುವುದಿಲ್ಲ ಎಂದು ಸುಸಂಗತವಾಗಿ ತೀರ್ಮಾನಿಸಿದೆ. ಲಕ್ಷ್ಮಪ್ಪ –ವಿರುದ್ಧ– ಚುನಾವಣಾಧಿಕಾರಿ, ರಾಣೆಬೆನ್ನೂರು ಮತ್ತು ಇತರರು ಪ್ರಕರಣದಲ್ಲಿ, ಈ ನ್ಯಾಯಾಲಯವು ಬೇರೆ ರೀತಿಯ ಅಭಿಪ್ರಾಯ ಕೈಗೊಂಡಿದೆಯೆಂಬುದು ನಿಜ ಮತ್ತು ಅದು ಒಬ್ಬ ಸಿವಿಲ್ ನ್ಯಾಯಾಧೀಶರು ನಿಯುಕ್ತ ವ್ಯಕ್ತಿಯಲ್ಲ. ಆದರೆ, ಅವರು ಒಂದು ನ್ಯಾಯಾಲಯ ಎಂಬುದಾಗಿ ತೀರ್ಮಾನಿಸಿದೆ. ಹಾಗಿದ್ದರೂ, ಲಕ್ಷ್ಮಪ್ಪ ಪ್ರಕರಣದಲ್ಲಿ ಈ ಮೇಲೆ ಹೇಳಲಾದ ಪ್ರಕರಣಗಳು ನ್ಯಾಯಾಲಯದ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ಲಕ್ಷ್ಮಪ್ಪ (ಮೇಲೆ ಹೇಳಿದ) ಬದ್ಧಗೊಳಿಸುವ ಪ್ರಾಧಿಕಾರವಲ್ಲ. ಮೇಲಾಗಿ, ಸಿವಿಲ್ ನ್ಯಾಯಾಧೀಶರಿಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಕೊಟ್ಟಿರುವುದಿಲ್ಲ. ಹೀಗಾಗಿ, ನ್ಯಾಯಾಲಯವು ಅಧಿನಿಯಮದ 15ನೇ ಪ್ರಕರಣದಡಿ ನಿಯುಕ್ತಗೊಳಿಸಿದ ನ್ಯಾಯಾಲಯವಾಗಿದೆ. ಆದರೆ, ಅದನ್ನು ಸಂಹಿತೆಯಡಿ ಇರುವ ಎಲ್ಲಾ ಅಧಿಕಾರಗಳನ್ನು ಹೊಂದಿರುವ ಸಿವಿಲ್ ನ್ಯಾಯಾಲಯವೆಂದು ಹೇಳಲು ಬರುವುದಿಲ್ಲ.

ಅತ್ಯಂತ ಮುಖ್ಯವಾಗಿ, ಚುನಾವಣಾ ಅರ್ಜಿಯನ್ನು "ದಾವೆಗಳ ಅಧಿವಿಚಾರಣೆಗೆ, ಸಾಧ್ಯವಾದಷ್ಟುಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಅನ್ವಯಿಸಬಹುದಾದ ಕಾರ್ಯಪ್ರಕ್ರಿಯೆಗೆ ಅನುಸಾರವಾಗಿ ಅಧಿವಿಚಾರಿಸತಕ್ಕದ್ದೆಂದು 17ನೇ ಪ್ರಕರಣದ 7ನೇ ಉಪ–ಪ್ರಕರಣವು ಸ್ಪಷ್ಟವಾಗಿ ಗೊತ್ತುಪಡಿಸುತ್ತದೆ". ಸಾಧ್ಯವಾದಷ್ಟುಮಟ್ಟಿಗೆ ಎಂಬ ಪದಬಳಕೆಯು ಚುನಾವಣಾ ಅರ್ಜಿಯ ಅಧಿವಿಚಾರಣೆಯ ಸಂದರ್ಭದಲ್ಲಿ ಇಡೀ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಅನ್ವಯಿಸಬಾರದು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ದಾವೆಯ ಅಧಿವಿಚಾರಣೆಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಅನ್ವಯಿಸಬಹುದಾದ ಕಾರ್ಯಪ್ರಕ್ರಿಯೆಯನ್ನು ಅನ್ವಯಿಸಬೇಕಾಗುತ್ತದೆ.

"ದಾವೆಯ ಅಧಿವಿಚಾರಣೆಗಾಗಿ ಕಾರ್ಯ ಪ್ರಕ್ರಿಯೆ" ಎಂಬುದು ಸಂಹಿತೆಯ 9 ರಿಂದ 33 ಪ್ರಕರಣಗಳಲ್ಲಿ ಮತ್ತು ಸಂಹಿತೆಯ 1 ರಿಂದ 20ರ ವರೆಗಿನ ಆದೇಶಗಳಲ್ಲಿ ಒಳಗೊಂಡಿದೆ. ಆದರೆ, "ದಾವೆಯ ಅಧಿವಿಚಾರಣೆಗಾಗಿನ ಕಾರ್ಯಪ್ರಕ್ರಿಯೆ"ಯನ್ನು ಒಳಗೊಳ್ಳುವುದರ ಜೊತೆಗೆ ಸಂಹಿತೆಯ ಭಾಗ –IIIರಲ್ಲಿ ಒಳಗೊಂಡಿರುವ ಪ್ರಾಸಂಗಿಕ

ಕಾರ್ಯಪ್ರಕ್ರಿಯೆಗಳು ಹಾಗೂ ಸಂಹಿತೆಯ ಭಾಗ–VIರಲ್ಲಿ ಒಳಗೊಂಡಿರುವ ಪೂರಕ ಕಾರ್ಯ ಪ್ರಕ್ರಿಯೆಗಳಂಥ ಇತರ ಉಪಬಂಧಗಳನ್ನು ಸಹ ಸಂಹಿತೆಯು ಒಳಗೊಳ್ಳುತ್ತದೆ. ವಾಸ್ತವವಾಗಿ, ಸಂಹಿತೆಯ ಭಾಗ–VI ರಲ್ಲಿ ಒಳಗೊಂಡಿರುವ 94ನೇ ಪ್ರಕರಣವು ಸಿವಿಲ್ ನ್ಯಾಯಾಲಯಕ್ಕೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಅಧಿಕಾರವನ್ನು ಕೊಡುತ್ತದೆ. ಸದರಿ ಅಧಿಕಾರವನ್ನು ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರಲ್ಲಿ ಇನ್ನಷ್ಟು ವಿಸ್ತರಿಸಲಾಗಿದೆ. ಆದುದರಿಂದ, ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವ ಅಧಿಕಾರವು ಪೂರಕ ಕಾರ್ಯಪ್ರಕ್ರಿಯೆಗಳ ಭಾಗವಾಗಿದೆ. ಇದು "ದಾವೆಯ ಅಧಿವಿಚಾರಣೆಗಾಗಿ ಕಾರ್ಯಪ್ರಕ್ರಿಯೆ"ಯ ಭಾಗವನ್ನು ರೂಪಿಸುವುದಿಲ್ಲ. ಹೀಗಾಗಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಈ ಅಧಿನಿಯಮದ 17ನೇ ಪ್ರಕರಣದೊಂದಿಗೆ ಓದಲಾದ 15ನೇ ಪ್ರಕರಣದಡಿ ಚುನಾವಣಾ ಅರ್ಜಿಯನ್ನು ಅಧಿವಿಚಾರಣೆ ಮಾಡುವಾಗ, ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಅಧಿಕಾರವನ್ನು ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಇವರಲ್ಲಿ ನಿಹಿತಗೊಳಿಸಿರುವುದಿಲ್ಲ.

ಉಪಬಂಧವು "ಏನೇ ಇದ್ದರೂ" ಎಂಬ ಖಂಡದೊಂದಿಗೆ ಪ್ರಾರಂಭವಾಗುವುದರಿಂದ, ತತ್ಕಾಲದಲ್ಲಿ ಜಾರಿಯಲ್ಲಿರುವ ಎಲ್ಲಾ ಕಾನೂನುಗಳ ಅನ್ವಯಿಸುವಿಕೆಯನ್ನು ಇದು ಸ್ಪಷ್ಟವಾಗಿ ಇಲ್ಲದಂತೆ ಮಾಡುತ್ತದೆ. ಇದು ಪ್ರಕರಣ 94ರಡಿ ಮತ್ತು ಸಂಹಿತೆಯ ಕ್ರಮಾದೇಶ 39, ನಿಯಮ 1 ಹಾಗೂ 2ರಡಿ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಸಹ ಒಳಗೊಳ್ಳುತ್ತದೆ. ಆದಾಗ್ಯೂ, ಉಪಬಂಧವು "ಅಧಿನಿಯಮದಡಿ ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿನ ಯಾವುದೇ ವ್ಯವಹರಣೆಯನ್ನು ನಿಗ್ರಹಿಸುವ" ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವುದರಿಂದ ಅಥವಾ ಮಧ್ಯಕಾಲೀನ ಆದೇಶವನ್ನು ಹೊರಡಿಸುವುದರಿಂದ ನ್ಯಾಯಾಲಯವನ್ನು ನಿಷೇಧಿಸುತ್ತದೆ. ಹಾಗಿದ್ದರೂ, ಸದ್ಯದ ಪ್ರಕರಣದಲ್ಲಿ, ಅಧಿನಿಯಮದಡಿ ಅಧ್ಯಕ್ಷರ ಚುನಾವಣೆಯನ್ನು ನಡೆಸಲು ಮಾನ್ಯ ಸಿವಿಲ್ ನ್ಯಾಯಾಧೀಶರು ಯಾವುದೇ ವ್ಯವಹರಣೆಯನ್ನು ನಿಗ್ರಹಿಸಿಲ್ಲ. ಮಾನ್ಯ ಸಿವಿಲ್ ನ್ಯಾಯಾಧೀಶರು ಗ್ರಾಮಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುವುದರಿಂದ ಮಾತ್ರ ಅರ್ಜಿದಾರನನ್ನು ನಿಗ್ರಹಿಸಿದ್ದಾರೆ. ಆದುದರಿಂದ, ಮಾನ್ಯ

ಸಿವಿಲ್ ನ್ಯಾಯಾಧೀಶರು ಅಧಿನಿಯಮದ 291ನೇ ಪ್ರಕರಣದಲ್ಲಿ ಒಳಗೊಂಡಿರುವ ನಿಷೇಧವನ್ನು ಉಲ್ಲಂಘಿಸಿದ್ದಾರೆ ಎಂಬ ಮಾನ್ಯ ಹಿರಿಯ ವಕೀಲರ ವಾದವನ್ನು ಅಂಗೀಕರಿಸಲಾಗದು.

ಆದಾಗ್ಯೂ, ಮಾನ್ಯ ಸಿವಿಲ್ ನ್ಯಾಯಾಧೀಶರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿಲ್ಲವಾದ್ದರಿಂದ, ಪ್ರಶ್ನಿತ ಆದೇಶವು ಅವರ ಅಧಿಕಾರವ್ಯಾಪ್ತಿಗೆ ಮೀರಿದ್ದಾಗಿದೆ. ಹೀಗಾಗಿ, ಪ್ರಶ್ನಿತ ಆದೇಶವು ಪ್ರಾರಂಭದಿಂದಲೇ ಶೂನ್ಯವಾದದ್ದಾಗಿದೆ. ಆದುದರಿಂದ, ದಿನಾಂಕ: 7.7.2015ರ ಪ್ರಶ್ನಿತ ಆದೇಶವನ್ನು ರದ್ದುಮಾಡಲಾಗಿದೆ. ರಿಟ್ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 1969 ಐಎಲ್‌ಆರ್ ಎಂವೈಎಸ್. 734<br>ಶ್ರೀ ಎಸ್. ನಾಗನಗೌಂಡ್ -ವಿರುದ್ಧ- ವೈ. ಬಾಸಿ ರೆಡ್ಡಿ* | *(ಉಲ್ಲೇ) 4* |
| *2. (1979 (2) ಕೆಎಆರ್. ಎಲ್.ಜೆ. 171<br>ಮಲ್ಲೇಶಪ್ಪ -ವಿರುದ್ಧ- ರೇವಣಸಿದ್ದಪ್ಪ ಮತ್ತು ಇತರರು* | *(ಉಲ್ಲೇ) 4* |
| *3. ರಿಟ್ ಅರ್ಜಿ ಸಂಖ್ಯೆ 82245/2013, ದಿನಾಂಕ 31.7.2014<br>ಭೈರಗೌಡ ಸನ್/ಆಫ್ ಬಾಲಗೌಡ ಪಾಟೀಲ್ -ವಿರುದ್ಧ-<br>ಸುಧೀರ್ ನಾಗೇಶ್ ಗಡ್ಡೆ* | *(ಉಲ್ಲೇ) 4* |
| *4. (1995)1 ಕೆಎಎನ್‌ಟಿ ಎಲ್.ಜೆ. 289<br>ಲಕ್ಷ್ಮಪ್ಪ -ವಿರುದ್ಧ- ಚುನಾವಣಾಧಿಕಾರಿ<br>ರಾಣೆಬೆನ್ನೂರು ಮತ್ತು ಇತರರು* | *(ಉಲ್ಲೇ) 5* |
| *5. 2007 ಎಐಆರ್ (ಎಸ್‌ಸಿಡಬ್ಲ್ಯು) 304<br>ಸಾಧಿ ವಿಜಯ್ ಕುಮಾರ್ -ವಿರುದ್ಧ-<br>ತೋತಾ ಸಿಂಗ್ ಮತ್ತು ಇತರರು* | *(ಉಲ್ಲೇ) 5* |

*6. (2009) 10 ಎಸ್‌ಸಿಸಿ 541*
*ರಾಮ್ ಸುಖ್ –ವಿರುದ್ಧ– ದಿನೇಶ್ ಅಗರ್‌ವಾಲ್ (ಉಲ್ಲೇ) 5*

*7. 2005(6) ಕೆಎಆರ್ ಎಲ್.ಜೆ.484*
*ವಿನಯ್‌ಕುಮಾರ್ ಸೂರಿಂಜೆ ಮತ್ತು ಇನ್ನೊಬ್ಬರು –ವಿರುದ್ಧ–*
*ರಿಟರ್ನಿಂಗ್ ಅಧಿಕಾರಿ/ತಹಸೀಲ್ದಾರ್ ಮತ್ತು ಇತರರು (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ವೈ.ಆರ್. ಸದಾಶಿವರೆಡ್ಡಿ, ಹಿರಿಯ ವಕೀಲರು.
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ. ಅಶ್ವಥಪ್ಪ, ಎಜಿಎ.
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೆ.ಎನ್. ಫಣೀಂದ್ರ, ವಕೀಲರು.
5ನೇ ಪ್ರತ್ಯರ್ಜಿದಾರರ ಪರ : ಶ್ರೀ ಶ್ಯಾಮ್ ಕೌಂಡಿನ್ಯ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್:**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (ಸಂಕ್ಷಿಪ್ತವಾಗಿ 'ಅಧಿನಿಯಮ') 15ನೇ ಪ್ರಕರಣದಡಿ ಚುನಾವಣಾ ಅರ್ಜಿಯಲ್ಲಿ ಗ್ರಾಮ ಪಂಚಾಯತಿ ಸದಸ್ಯರೊಬ್ಬರ ಆಯ್ಕೆಯನ್ನು ಪ್ರಶ್ನಿಸಿದ್ದು, ಚುನಾವಣಾ ಅರ್ಜಿಯು ಬಗ್ಗೆ ವ್ಯವಹರಿಸುವಾಗ ಸಿವಿಲ್ ನ್ಯಾಯಾಧೀಶರೆಂದರೆ (ಕಿರಿಯ ವಿಭಾಗ) ನಿಯುಕ್ತ ವ್ಯಕ್ತಿಯೆ? ಅಥವಾ ಸಿವಿಲ್ ನ್ಯಾಯಾಲಯವೆ? ಸಿವಿಲ್ ನ್ಯಾಯಾಧೀಶರು ಸಿವಿಲ್ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತವಾಗಿ 'ಸಂಹಿತೆ') 39ನೇ ಕ್ರಮಾದೇಶದ 1 ಮತ್ತು 2ನೇ ನಿಯಮದಡಿ ಅಧಿಕಾರವನ್ನು ಹೊಂದಿದ್ದಾರೆಯೇ? ಅಥವಾ ಇಲ್ಲವೆ? ಎಂಬುದಾಗಿ ಈ ನ್ಯಾಯಾಲಯದ ಮುಂದೆ ಎರಡು ಚರ್ಚಾಸ್ಪದ ಪ್ರಶ್ನೆಗಳಿವೆ. ಸದರಿ ವಿವಾದಾಂಶಗಳು ಈ ಮುಂದಿನ ವಾಸ್ತವಿಕ ಅಂಶಗಳ ಪಟ್ಟಿಯಲ್ಲಿ ಉದ್ಭವಿಸಿವೆ:

2. ಗ್ರಾಮ ಪಂಚಾಯತಿಯ ಚುನಾವಣೆ ಎಂದರೆ ವಾಟದ ಹೊಸಹಳ್ಳಿ ಗ್ರಾಮ ಪಂಚಾಯತಿ ಚುನಾವಣೆಯನ್ನು ದಿನಾಂಕ:02.06.2015ರಂದು ನಡೆಸಲಾಯಿತು. ಸದರಿ ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನಕ್ಕಾಗಿ ಶ್ರೀಮತಿ ಗೌರಮ್ಮ, ಅರ್ಜಿದಾರರು, ಮತ್ತು ಶ್ರೀಮತಿ ನಾಗಲಕ್ಷಮ್ಮ, 5ನೇ ಪ್ರತ್ಯರ್ಜಿದಾರರು ಇವರಿಬ್ಬರೂ ಚುನಾವಣೆಗೆ ಸ್ಪರ್ಧಿಸಿರುತ್ತಾರೆ. ಅರ್ಜಿದಾರರು ಸದಸ್ಯರಾಗಿ ಆಯ್ಕೆಯಾಗಿದ್ದು, ಅದೇ ಸಮಯದಲ್ಲಿ ಶ್ರೀಮತಿ ನಾಗಲಕ್ಷ್ಮಮ್ಮ ಚುನಾವಣೆಯಲ್ಲಿ ಸೋತಿರುತ್ತಾರೆ. ಆದುದರಿಂದ, ಆಕೆಯು ಸದರಿ ಗ್ರಾಮ ಪಂಚಾಯತಿಯ ಸದಸ್ಯರನ್ನಾಗಿ ಅರ್ಜಿದಾರಳ ಆಯ್ಕೆ ಹಾಗೂ ಅದರ ಜೊತೆಗೆ ಶ್ರೀ ಮಲ್ಲಪ್ಪನವರ ಆಯ್ಕೆಯನ್ನು ಪ್ರಶ್ನಿಸಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ), ಮತ್ತು ಜೆಎಂಎಫ್‌ಸಿ, ಗುಡಿಬಂಡೆ, ಇವರ ಮುಂದೆ ಚುನಾವಣಾ ಅರ್ಜಿಯನ್ನು ದಾಖಲಿಸಿದ್ದಾರೆ. ಸದರಿ ಚುನಾವಣಾ ಅರ್ಜಿಯನ್ನು ಅಧಿನಿಯಮದ 15 ಮತ್ತು 19ರ ಪ್ರಕರಣಗಳಡಿ ಸಲ್ಲಿಸಲಾಗಿರುತ್ತದೆ. ಆಕೆಯ ಅರ್ಜಿಯಲ್ಲಿ, ಮತದಾನ ಮಾಡಲು ಬಂದಿದ್ದ ಮತದಾರರಿಗೆ ಮತಪತ್ರಗಳನ್ನು ನೀಡುವ ಮುನ್ನ ರಿಟರ್ನಿಂಗ್ ಅಧಿಕಾರಿಯು ಸುಮಾರು 100 ಮತಪತ್ರಗಳಿಗೆ ಸಹಿ ಹಾಕಿರಲಿಲ್ಲ; ಅಂಚೆ ಮತಪತ್ರದಡಿ ಸ್ವೀಕರಿಸಲು ಅನುಮೋದಿಸಲಾಗಿದ್ದ ಒಂಬತ್ತು ಮತಪತ್ರಗಳಲ್ಲಿ ಒಂದನ್ನು ಅದು ಕೆ.ಎನ್. ನರಸಿಂಹಮೂರ್ತಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅದನ್ನು ಚಲಾವಣೆ ಮಾಡಲು ಅಕ್ರಮವಾಗಿ ಅನುಮತಿಸಲಾಗಿರುತ್ತದೆ. ಅಲ್ಲದೆ, ಅವನ ಮತಪತ್ರವನ್ನು ತಪ್ಪಾಗಿ ನಿರೂಪಿಸಿ, ಅವನ ಕಳ್ಳರುಜುವಿನ ಮೂಲಕ ಸ್ವೀಕರಿಸಿ ಮತ್ತು ಅದನ್ನು ಕಳ್ಳರುಜು ಹಾಕಿ ಮತದಾನ ಸಹ ಮಾಡಲಾಗಿರುತ್ತದೆಯೆಂದು ಶ್ರೀಮತಿ ನಾಗಲಕ್ಷ್ಮಮ್ಮ ಆಪಾದಿಸಿರುತ್ತಾರೆ. ಅಷ್ಟೇ ಅಲ್ಲದೆ, ಎಣಿಕೆ ದಿನವಾದ 5.6.2015ರಂದು, ರಿಟರ್ನಿಂಗ್ ಅಧಿಕಾರಿಯು, ಅಭ್ಯರ್ಥಿಗಳಿಗೆ ಅಥವಾ ಅವರ ಏಜೆಂಟರಿಗೆ ಚುನಾವಣೆ ನಡೆಸುವಲ್ಲಿನ ಅಕ್ರಮಗಳನ್ನು ಅಥವಾ ಕಾನೂನುಬಾಹಿರ ಕೃತ್ಯಗಳನ್ನು ಎತ್ತಿ ತೋರಿಸುವ ಅವಕಾಶವನ್ನೇ ನೀಡದೆ, ಹಾಗೂ ಅವರಿಗೆ ಸಿಂಧುವಾದ ಮತಗಳ ಮರು ಎಣಿಕೆಗೆ ಕೋರಲು ಅವಕಾಶವನ್ನೇ ನೀಡದೆ ಅಂತಿಮ ಎಣಿಕೆ ವರದಿಯನ್ನು ಸಲ್ಲಿಸಿರುತ್ತಾರೆ. ಮತದಾರರಲ್ಲಿ ಕೆಲವರು ಚುನಾವಣಾ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ ಮಾಡಿ, ಮೂರು ವಿವಿಧ ಚುನಾವಣಾ ಕ್ಷೇತ್ರಗಳಲ್ಲಿ ತಮ್ಮ ಮತ ಹಾಕುವ ಹಕ್ಕನ್ನು ಚಲಾಯಿಸಿದ್ದಾರೆಂದೂ

ಸಹ ಆಪಾದಿಸಲಾಗಿರುತ್ತದೆ. ಆದುದರಿಂದ, ಈ ಅಕ್ರಮಗಳು ಮತ್ತು ಕಾನೂನುಬಾಹಿರ ಕೆಲಸಗಳು ಶ್ರೀಮತಿ ಗೌರಮ್ಮರವರನ್ನು, ಇನ್ನೇನು ಆರಂಭವಾಗಲಿರುವ ಗ್ರಾಮ ಪಂಚಾಯಿತಿಗೆ ಅಧ್ಯಕ್ಷೀಯ ಅಭ್ಯರ್ಥಿಯನ್ನಾಗಿ ನಾಮನಿರ್ದೇಶನ ಮಾಡಲು ಅನುಚಿತ ಲಾಭವನ್ನು ತರುತ್ತವೆ. ಹೀಗಾಗಿ, ಈ ಚುನಾವಣೆಯನ್ನು ಕಾನೂನುಬಾಹಿರವೆಂದು ಘೋಷಿಸುವಂತೆ, ದಿನಾಂಕ:5.6.2015ರ ಚುನಾವಣಾ ಫಲಿತಾಂಶವನ್ನು ತಳ್ಳಿಹಾಕುವಂತೆ ಹಾಗೂ ಹೊಸದಾಗಿ ಚುನಾವಣೆಯನ್ನು ನಡೆಸುವಂತೆ ಶ್ರೀಮತಿ ನಾಗಲಕ್ಷ್ಮಮ್ಮ ಕೋರಿರುತ್ತಾರೆ. ಚುನಾವಣಾ ಅರ್ಜಿಯೊಂದಿಗೆ ಶ್ರೀಮತಿ ನಾಗಲಕ್ಷ್ಮಮ್ಮ, ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ಯಾರೇ ಸದಸ್ಯರನ್ನು ನಾಮನಿರ್ದೇಶನ ಮಾಡುವುದರಿಂದ ಗೌರಮ್ಮನನ್ನು ನಿಗ್ರಹಿಸುವುದೂ ಸೇರಿದಂತೆ, ಗ್ರಾಮಪಂಚಾಯತಿ ಸದಸ್ಯಳಾಗಿ ಕಾರ್ಯ ನಿರ್ವಹಿಸಲು ಮುಂದುವರೆಯುವುದರಿಂದ ಆಕೆಯನ್ನು ನಿಗ್ರಹಿಸುವುದಕ್ಕಾಗಿ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿ ತಾತ್ಕಾಲಿಕ ನಿರ್ಬಂಧಕಾಜ್ಞೆಗೆ ಅರ್ಜಿಯನ್ನು ಸಹ ಸಲ್ಲಿಸಿದ್ದಾರೆ.

3. ದಿನಾಂಕ: 7.7.2015ರ ಆದೇಶದ ಮೂಲಕ, ಮಾನ್ಯ ಸಿವಿಲ್ ನ್ಯಾಯಾಧೀಶರು ಸಂಹಿತೆಯ 39ನೇ ಕ್ರಮಾದೇಶ 1 ಮತ್ತು 2ನೇ ನಿಯಮಗಳ ಅಡಿಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಗಾಗಿನ ಅರ್ಜಿಯನ್ನು ಪುರಸ್ಕರಿಸಿರುತ್ತಾರೆ. ಆದ್ದರಿಂದ, ಈ ಅರ್ಜಿಯು ಈ ನ್ಯಾಯಾಲಯದ ಮುಂದಿದೆ.

4. ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಸಿವಿಲ್ ನ್ಯಾಯಾಲಯವಲ್ಲ, ಆದರೆ ಅವರು ನಿಯುಕ್ತ ವ್ಯಕ್ತಿಯಾಗಿರುತ್ತಾರೆ; ಹಾಗಾಗಿ, ಅವರು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರುವುದಿಲ್ಲ. ಆದುದರಿಂದ, ಅವರು ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರ ಮೇರೆಗಿನ ಅಧಿಕಾರಗಳನ್ನು ಹೊಂದಿಲ್ಲ. ಹೀಗಾಗಿ, ಮಾನ್ಯ ಸಿವಿಲ್ ನ್ಯಾಯಾಧೀಶರು, ಅರ್ಜಿದಾರಳನ್ನು ಗ್ರಾಮಪಂಚಾಯತಿ ಸದಸ್ಯಳಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ನಿಗ್ರಹಿಸಿ ದಿನಾಂಕ: 7.7.2015ರ ಪ್ರಶ್ನಿತ ಆದೇಶವನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ ಎಂದು ತಮ್ಮ ವಾದವನ್ನು ಸಮರ್ಥಿಸುವ ಸಲುವಾಗಿ, ಅರ್ಜಿದಾರರ ಪರ ಮಾನ್ಯ ಹಿರಿಯ ವಕೀಲರಾದ ಶ್ರೀ ಸದಾಶಿವ

ರೆಡ್ಡಿಯವರು ಈ ನ್ಯಾಯಾಲಯದ ಮೂರು ತೀರ್ಪುಗಳ ಮೇಲೆ ಅವಲಂಬಿತರಾಗಿದ್ದಾರೆ. ಅವು, ***ಶ್ರೀ ಎಸ್. ನಾಗನಗೌಂಡ್ -ವಿರುದ್ಧ- ವೈ. ಬಾಸಿ ರೆಡ್ಡಿ***[1], ***ಮಲ್ಲೇಶಪ್ಪ -ವಿರುದ್ಧ- ರೇವಣಸಿದ್ದಪ್ಪ ಮತ್ತು ಇತರರು***[2], ಹಾಗೂ ***ಭೈರಗೌಡ ಸನ್/ಆಫ್ ಬಾಲಗೌಡ ಪಾಟೀಲ್ -ವಿರುದ್ಧ- ಸುಧೀರ್ ನಾಗೇಶ್ ಗಡ್ಡೆ***[3], ಈ ನ್ಯಾಯಾಲಯದಿಂದ ನಿರ್ಣಯಿಸಲಾಗಿದೆ.

ಎರಡನೆಯದಾಗಿ, ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಯು ಸದ್ಯದಲ್ಲೇ ನಡೆಯಲಿದ್ದುದರಿಂದ, ಚುನಾವಣಾ ಪ್ರಕ್ರಿಯೆ ಆಗಲೂ ಮುಂದುವರಿದಿತ್ತು. ಅಧಿನಿಯಮದ 291ನೇ ಪ್ರಕರಣದಡಿ, ಸಿವಿಲ್ ನ್ಯಾಯಾಲಯವನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವುದರಿಂದ ಪ್ರತಿಬಂಧಿಸಲಾಗಿದೆ. ಆದ್ದರಿಂದ, ಪ್ರಶ್ನಿತ ಆದೇಶವು ಅಧಿನಿಯಮದ 291ನೇ ಪ್ರಕರಣದಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ಉಲ್ಲಂಘಿಸುತ್ತದೆ. ಹೀಗಾಗಿ, ಪ್ರಶ್ನಿತ ಆದೇಶವು ಕಾನೂನಾತ್ಮಕವಾಗಿ ಸಮರ್ಥನೀಯವಲ್ಲವೆಂದು ನಿವೇದಿಸಿದ್ದಾರೆ.

5. ಇದಕ್ಕೆ ವಿರುದ್ಧವಾಗಿ, 5ನೇ ಪ್ರತ್ಯರ್ಜಿದಾರರಾದ ಶ್ರೀಮತಿ ನಾಗಲಕ್ಷ್ಮಮ್ಮನವರ ಪರ ಮಾನ್ಯ ವಕೀಲರಾದ ಶ್ಯಾಮ್ ಕೌಂಡಿನ್ಯರವರು ಈ ನ್ಯಾಯಾಲಯದ ಮುಂದೆ ಈ ಮುಂದಿನ ವಾದಗಳನ್ನು ಎತ್ತಿದ್ದಾರೆ; ಮೊದಲನೆಯದಾಗಿ, ಅಧಿನಿಯಮದ 15ನೇ ಪ್ರಕರಣದಡಿ, ಸಿವಿಲ್ ನ್ಯಾಯಾಲಯವು ನಿಯುಕ್ತ ವ್ಯಕ್ತಿಯಲ್ಲ. ಆದರೆ ಅದು ಸಿವಿಲ್ ನ್ಯಾಯಾಲಯವಾಗಿದೆ. ಈ ವಾದವನ್ನು ಸಮರ್ಥಿಸುವ ಸಲುವಾಗಿ, ಮಾನ್ಯ ವಕೀಲರು ***ಲಕ್ಷ್ಮಪ್ಪ -ವಿರುದ್ಧ- ಚುನಾವಣಾಧಿಕಾರಿ, ರಾಣೆಬೆನ್ನೂರು ಮತ್ತು ಇತರರು***[4], ಪ್ರಕರಣದ ಮೇಲೆ ಅವಲಂಬಿತರಾಗಿದ್ದಾರೆ.

1. 1969 ಐಎಲ್‌ಆರ್ ಎಂವೈಎಸ್. 734 2. 1979(2) ಕೆಎಆರ್. ಎಲ್.ಜೆ. 171
3. ರಿಟ್ ಅರ್ಜಿ ಸಂಖ್ಯೆ 82245/2013, ದಿನಾಂಕ 31.7.2014
4. (1995)1 ಕೆಎಎನ್‌ಟಿ ಎಲ್.ಜೆ. 289

ಎರಡನೆಯದಾಗಿ, ಅಧಿನಿಯಮದ 17(7) ಪ್ರಕರಣಕ್ಕೆ ಅನುಸಾರವಾಗಿ, ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಿವಿಲ್ ನ್ಯಾಯಾಧೀಶರು ಅಧಿವಿಚಾರಣೆ ನಡೆಸತಕ್ಕದ್ದು. ಅದು ದಾವೆಗಳ ಅಧಿವಿಚಾರಣೆಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಡಿ ಅನ್ವಯಿಸಬಹುದಾದ ಪ್ರಕ್ರಿಯೆಗಳಿಗೆ ಆದಷ್ಟುಮಟ್ಟಿಗೆ ಅನುಸಾರವಾಗಿ ಇರತಕ್ಕದ್ದು. ಹೀಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಒಳಗೊಂಡಿರುವ ಎಲ್ಲಾ ಅಧಿಕಾರಗಳನ್ನು ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ನೀಡಲಾಗಿರುತ್ತದೆ. ಈ ವಾದವನ್ನು ಸಮರ್ಥಿಸುವ ಸಲುವಾಗಿ, ಮಾನ್ಯ ವಕೀಲರು ***ಸಾಥಿ ವಿಜಯ್ ಕುಮಾರ್ –ವಿರುದ್ಧ – ತೋತಾ ಸಿಂಗ್ ಮತ್ತು ಇತರರು***[5], ಮತ್ತು ***ರಾಮ್‌ಸುಖ್ –ವಿರುದ್ಧ – ದಿನೇಶ್ ಅಗರ್‌ವಾಲ್***[6], ಪ್ರಕರಣಗಳ ಮೇಲೆ ಅವಲಂಬಿತರಾಗಿದ್ದಾರೆ. ಆದ್ದರಿಂದ, ಮಾನ್ಯ ಸಿವಿಲ್ ನ್ಯಾಯಾಧೀಶರು ಈ ಅರ್ಜಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರಡಿ ವಿಫುಲ ಅಧಿಕಾರಗಳನ್ನು ಹೊಂದಿದ್ದಾರೆ. ಆದುದರಿಂದ ಪ್ರಶ್ನಿತ ಆದೇಶವು ಕಾನೂನಾತ್ಮಕವಾಗಿ ಸಿಂಧುವಾಗಿದೆಯೆಂದು ನಿವೇದಿಸಿದ್ದಾರೆ.

ಮೂರನೆಯದಾಗಿ, 5ನೇ ಪ್ರತ್ಯರ್ಜಿದಾರರು ಚುನಾವಣೆ ಮುಗಿದುಹೋದ ನಂತರ ಅರ್ಜಿದಾರ ಚುನಾವಣೆಯನ್ನು ಪ್ರಶ್ನಿಸಿರುವುದರಿಂದ, ಅಧಿನಿಯಮದ 291ನೇ ಪ್ರಕರಣವು ಇದಕ್ಕೆ ಅನ್ವಯಿಸುವುದಿಲ್ಲ. ಅಧಿನಿಯಮದ 291ನೇ ಪ್ರಕರಣವು, ಸದಸ್ಯರ ಚುನಾವಣೆಯೊಂದಿಗೆ ಗ್ರಾಮ ಪಂಚಾಯತಿ ಚುನಾವಣೆಯು ಮುಕ್ತಾಯವಾಗಿದ್ದರಿಂದ, ಚುನಾವಣೆಯ ಅವಧಿಯಲ್ಲಿ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದರಿಂದ ನ್ಯಾಯಾಲಯವನ್ನು ತಡೆಯಲಾಗಿರುವುದರಿಂದಾಗಿ, ಇದಕ್ಕೆ ಅಧಿನಿಯಮದ 291ನೇ ಪ್ರಕರಣದಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ಅನ್ವಯಿಸಲಾಗಿಲ್ಲ. ಹೀಗಾಗಿ ಮಾನ್ಯ ಸಿವಿಲ್ ನ್ಯಾಯಾಧೀಶರು ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರಡಿಯಲ್ಲಿ ತನ್ನ ಅಧಿಕಾರವನ್ನು ನ್ಯಾಯಸಮ್ಮತವಾಗಿಯೆ ಚಲಾಯಿಸಿದ್ದಾರೆ. ಆದುದರಿಂದ, ಮಾನ್ಯ ವಕೀಲರು ಪ್ರಶ್ನಿತ ಆದೇಶವನ್ನು ಸಮರ್ಥಿಸಿದ್ದಾರೆ.

5. 2007 ಎಐಆರ್ (ಎಸ್‌ಸಿಡಬ್ಲ್ಯು) 304 6. [2009] 10 ಎಸ್‌ಸಿಸಿ 541

6. ಪ್ರತ್ಯುತ್ತರದಲ್ಲಿ, ಮಾನ್ಯ ಹಿರಿಯ ವಕೀಲ ಶ್ರೀ ಸದಾಶಿವರೆಡ್ಡಿಯವರು, ಅಧಿನಿಯಮದ 17(7)ನೇ ಪ್ರಕರಣವು, "ಪ್ರತಿಯೊಂದು ಚುನಾವಣಾ ಅರ್ಜಿಯನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಅನ್ವಯಿಸಬಹುದಾದ ಪ್ರಕ್ರಿಯೆಗೆ ಆದಷ್ಟುಮಟ್ಟಿಗೆ ಅನುಸಾರವಾಗಿದ್ದು, ಅದನ್ನು ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಅಧಿವಿಚಾರಣೆ ನಡೆಸತಕ್ಕದ್ದು" ಎಂಬ ಪದಗಳನ್ನು ಬಳಸುತ್ತದೆ. ಆದುದರಿಂದ ಚುನಾವಣಾ ಅರ್ಜಿಯನ್ನು "ಆದಷ್ಟು ಮಟ್ಟಿಗೆ" "ಅಧಿವಿಚಾರಣೆ ನಡೆಸಬೇಕು". ಈ ಪದಗಳು ಚುನಾವಣಾ ಅರ್ಜಿಯ ಅಧಿವಿಚಾರಣೆಗೆ ಇಡೀ ಸಂಹಿತೆಯು ಅನ್ವಯಿಸುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ ಎಂದು ನಿವೇದಿಸಿದ್ದಾರೆ.

ಎರಡನೆಯದಾಗಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ದಾವೆಯ ಅಧಿವಿಚಾರಣೆಗಾಗಿ "ಕಾರ್ಯಪ್ರಕ್ರಿಯೆ" ಯನ್ನು ಅನುಸರಿಸುವ ಅಗತ್ಯವಿದೆ. ಆದರೆ, ಸಂಹಿತೆಯ ಕ್ರಮಾದೇಶ 39, ನಿಯಮ 1 ಹಾಗೂ 2 ರಡಿಯಲ್ಲಿನ ಅರ್ಜಿಯು ದಾವೆಯ ಅಧಿವಿಚಾರಣೆಗಾಗಿನ 'ಕಾರ್ಯಪ್ರಕ್ರಿಯೆ'ಯ ಭಾಗವಲ್ಲ. ಇದು ಮುಖ್ಯ ದಾವೆಗೆ ಪೂರಕವಾದ ವ್ಯವಹರಣೆಯಾಗಿದೆ.

ಮೂರನೆಯದಾಗಿ, ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರಡಿಯಲ್ಲಿನ ಅಧಿಕಾರವನ್ನು ನಿರ್ದಿಷ್ಟವಾಗಿ ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ನೀಡಿರುವುದಿಲ್ಲ. ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ನಿಯುಕ್ತ ವ್ಯಕ್ತಿಯಾಗಿರುವುದರಿಂದ ವಿಶೇಷ ಅಧಿಕಾರವನ್ನು ಅವರಿಗೆ ನೀಡಬೇಕಿದೆ.

ನಾಲ್ಕನೆಯದಾಗಿ, ವಾದವಿವಾದಗಳಿಗೋಸ್ಕರ ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2 ರಡಿಯಲ್ಲಿ ಅಧಿಕಾರವನ್ನು ಸಿವಿಲ್ ನ್ಯಾಯಾಧೀಶರು ಹೊಂದಿದ್ದರೂ, ಆಗಲೂ ಸಹ ಮಾನ್ಯ ಸಿವಿಲ್ ನ್ಯಾಯಾಧೀಶರು, ಅನುಕೂಲದ ಆಧಿಕ್ಯವು 5ನೇ ಪ್ರತ್ಯರ್ಜಿದಾರರ ಕಡೆಗಿಲ್ಲ. ಆದರೆ ಅದು ಅರ್ಜಿದಾರರ ಕಡೆಗಿದೆಯೆಂಬುದನ್ನು ಅರ್ಥ ಮಾಡಿಕೊಂಡಿರಬೇಕಿತ್ತು. ಹೀಗಾಗಿ, ಸಂಹಿತೆಯ

ಕ್ರಮಾದೇಶ 39, ನಿಯಮ 1 ಹಾಗೂ 2 ರಡಿಯಲ್ಲಿನ ಅಧಿಕಾರವನ್ನು ಕಾನೂನುಬಾಹಿರವಾಗಿ ಚಲಾಯಿಸಲಾಗಿದೆ.

ಐದನೆಯದಾಗಿ, ***ಸಾಥಿ ವಿಜಯ್‌ಕುಮಾರ್*** (ಮೇಲೆ ಹೇಳಿದ) ಮತ್ತು ***ರಾಮ್ ಸುಖ್*** (ಮೇಲೆ ಹೇಳಿದ) ಎರಡೂ ಪ್ರಕರಣಗಳು ಸಂಹಿತೆಯ ಪ್ರಕ್ರಿಯಾತ್ಮಕ ಅಂಶಗಳೊಂದಿಗೆ ವ್ಯವಹರಿಸುವುದರಿಂದ ಅವುಗಳು ವಾಸ್ತವಿಕ ಆಧಾರದ ಮೇಲೆ ಬೇರೆ ಬೇರೆ ಎಂದು ಗುರುತಿಸಬಹುದಾದವುಗಳಾಗಿವೆ. ಸದರಿ ಪ್ರಕರಣಗಳು ಪೂರಕವಾದ ಪ್ರಕ್ರಿಯೆಗಳೊಂದಿಗೆ ವ್ಯವಹರಿಸುವುದಿಲ್ಲ. ಹೀಗಾಗಿ 5ನೇ ಪ್ರತ್ಯರ್ಜಿದಾರರಿಂದ ಉದಾಹರಿಸಲಾದ ತೀರ್ಪು ಜನ್ಯ ಕಾನೂನು ಆಕೆಯ ವಾದವನ್ನು ಸಮರ್ಥಿಸುವುದಿಲ್ಲ.

ಆರನೆಯದಾಗಿ, ಅಧಿನಿಯಮದ 291ನೇ ಪ್ರಕರಣವು, ಏನೇ ಇದ್ದರೂ ಎಂಬ ಖಂಡದಿಂದ ಆರಂಭವಾಗುತ್ತದೆ ಮತ್ತು 'ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ' ಜಾರಿಯಾಗುವುದನ್ನು ತಪ್ಪಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ಈ ಅಧಿನಿಯಮದಡಿ ಬರುವ ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿ, ಈ ಅಧಿನಿಯಮದಡಿ ಕೈಗೊಳ್ಳುತ್ತಿರುವ ಅಥವಾ ಕೈಗೊಳ್ಳಬೇಕಾದ ಯಾವುದೇ ವ್ಯವಹರಣೆಯನ್ನು ನಿಗ್ರಹಿಸುವ ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದರಿಂದ ಅಥವಾ ಯಾವುದೇ ಮಧ್ಯಕಾಲೀನ ಆದೇಶವನ್ನು ಮಾಡುವುದರಿಂದ ನ್ಯಾಯಾಲಯವನ್ನು ಪ್ರತಿಷೇಧಿಸುತ್ತದೆ. ಅಧ್ಯಕ್ಷರ ಚುನಾವಣೆಯು ಸದ್ಯದಲ್ಲೇ ನಡೆಯಲಿರುವುದರಿಂದ ಮಾನ್ಯ ಸಿವಿಲ್ ನ್ಯಾಯಾಧೀಶರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದರಿಂದ ಅರ್ಜಿದಾರರನ್ನು ನಿಗ್ರಹಿಸಲು ಸಾಧ್ಯವಿರುವುದಿಲ್ಲ ಮತ್ತು ಆಕೆಯು ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ಒಬ್ಬ ಸದಸ್ಯರನ್ನು ನಾಮ ನಿರ್ದೇಶನ ಮಾಡುವುದರಿಂದ ನಿಗ್ರಹಿಸಲು ಸಾಧ್ಯವಿರುವುದಿಲ್ಲ. ಹೀಗಾಗಿ, ಪ್ರಶ್ನಿತ ಆದೇಶವು ಅಧಿನಿಯಮದ 291ನೇ ಪ್ರಕರಣದಲ್ಲಿ ಒಳಗೊಂಡಿರುವ ಪ್ರತಿಷೇಧವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.

ಏಳನೆಯದಾಗಿ, ಚುನಾವಣಾ ಅರ್ಜಿಯಲ್ಲಿ, ನ್ಯಾಯಾಲಯವು, ಪಂಚಾಯತಿಯ ವ್ಯವಹಾರಗಳಲ್ಲಿ ಒಂದು ಧ್ವನಿಯಾದ ಆತ/ ಆಕೆಯು ಚುನಾವಣಾ ಕ್ಷೇತ್ರದಿಂದ ವಂಚಿತರಾಗುವ ಕಾರಣದಿಂದ ಸದಸ್ಯರ ಕಾರ್ಯ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಮಾನ್ಯ ಸಿವಿಲ್ ನ್ಯಾಯಾಧೀಶರು ಪ್ರಶ್ನಿತ ಆದೇಶವನ್ನು ಹೊರಡಿಸುವಾಗ ಈ ಅತ್ಯವಶ್ಯಕವಾದ ಸಂಗತಿಯನ್ನು ಗಮನಿಸಿರುವುದಿಲ್ಲ. ಆದ್ದರಿಂದ, ಪ್ರಶ್ನಿತ ಆದೇಶವು ಬದಿಗಿರಿಸಲು ತಕ್ಕುದಾಗಿದೆ.

7. ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ. ಪ್ರಶ್ನಿತ ಆದೇಶವನ್ನು ಅವಗಾಹಿಸಲಾಗಿದೆ ಮತ್ತು ನ್ಯಾಯಾಲಯದ ಸಮಕ್ಷಮದಲ್ಲಿ ಉದಾಹರಿಸಲಾದ ತೀರ್ಪುಜನ್ಯ ಕಾನೂನನ್ನು ಪರಿಶೀಲಿಸಲಾಗಿದೆ.

8. ***ಮಲ್ಲೇಶಪ್ಪ (ಮೇಲೆ ಹೇಳಿದ)*** ಪ್ರಕರಣದಿಂದ, ***ವಿನಯ್‌ಕುಮಾರ್ ಸೂರಿಂಜೆ ಮತ್ತು ಇನ್ನೊಬ್ಬರು –ವಿರುದ್ಧ– ರಿಟರ್ನಿಂಗ್ ಅಧಿಕಾರಿ/ತಹಸೀಲ್ದಾರ್ ಮತ್ತು ಇತರರು***[7] ವರೆಗೆ ***ಭೈರಗೌಡ*** (ಮೇಲೆ ಹೇಳಿದ) ಪ್ರಕರಣದವರೆಗೆ, ಈ ನ್ಯಾಯಾಲಯವು "ಅಧಿನಿಯಮದಡಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಧೀಶರು (ಮುನ್ಸಿಫ್) ಒಂದು ನ್ಯಾಯಾಲಯವಲ್ಲ. ಆದರೆ, ನಿಯುಕ್ತ ವ್ಯಕ್ತಿಯಾಗಿದ್ದಾರೆ ಮತ್ತು ಅದರಂತೆ, ಅವರು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಅನುಭೋಗಿಸುವುದಿಲ್ಲ ಎಂದು ಸುಸಂಗತವಾಗಿ ತೀರ್ಮಾನಿಸಿದೆ. ***ಲಕ್ಷ್ಮಪ್ಪ*** (ಮೇಲೆ ಹೇಳಿದ) ಪ್ರಕರಣದಲ್ಲಿ, ಈ ನ್ಯಾಯಾಲಯವು ಬೇರೆ ರೀತಿಯ ಅಭಿಪ್ರಾಯ ಕೈಗೊಂಡಿದೆಯೆಂಬುದು ನಿಜ ಮತ್ತು ಅದು ಒಬ್ಬ ಸಿವಿಲ್ ನ್ಯಾಯಾಧೀಶರು ನಿಯುಕ್ತ ವ್ಯಕ್ತಿಯಲ್ಲ. ಆದರೆ, ಅವರು ಒಂದು ನ್ಯಾಯಾಲಯ ಎಂಬುದಾಗಿ ತೀರ್ಮಾನಿಸಿದೆ. ಹಾಗಿದ್ದರೂ, ***ಲಕ್ಷ್ಮಪ್ಪ*** ಪ್ರಕರಣದಲ್ಲಿ ಈ ಮೇಲೆ ಹೇಳಲಾದ ಪ್ರಕರಣಗಳು ನ್ಯಾಯಾಲಯದ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ***ಲಕ್ಷ್ಮಪ್ಪ*** (ಮೇಲೆ ಹೇಳಿದ) ಬದ್ಧಗೊಳಿಸುವ ಪ್ರಾಧಿಕಾರವಲ್ಲ. ಮೇಲಾಗಿ, ಸಿವಿಲ್ ನ್ಯಾಯಾಧೀಶರಿಗೆ ಸಿವಿಲ್ ನ್ಯಾಯಾಲಯದ

7. 2005(6) ಕೆಎಲ್‌ಆರ್ ಎಲ್.ಜೆ.484

ಎಲ್ಲಾ ಅಧಿಕಾರಗಳನ್ನು ಕೊಟ್ಟಿರುವುದಿಲ್ಲ. ಹೀಗಾಗಿ, ನ್ಯಾಯಾಲಯವು ಅಧಿನಿಯಮದ 15ನೇ ಪ್ರಕರಣದಡಿ ನಿಯುಕ್ತಗೊಳಿಸಿದ ನ್ಯಾಯಾಲಯವಾಗಿದೆ. ಆದರೆ, ಅದನ್ನು ಸಂಹಿತೆಯುಡಿ ಇರುವ ಎಲ್ಲಾ ಅಧಿಕಾರಗಳನ್ನು ಹೊಂದಿರುವ ಸಿವಿಲ್ ನ್ಯಾಯಾಲಯವೆಂದು ಹೇಳಲು ಬರುವುದಿಲ್ಲ.

9. ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ನೀಡಲಾದ ಅಧಿಕಾರಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಅಧಿನಿಯಮದ 17ನೇ ಪ್ರಕರಣದ ವ್ಯಾಪ್ತಿಯನ್ನು ಪರಿಗಣಿಸಬೇಕಾಗುತ್ತದೆ. ಸದರಿ ಪ್ರಕರಣವು ಈ ಕೆಳಗಿನಂತಿದೆ:

> "***ಪ್ರಕರಣ 17: ಚುನಾವಣಾ ಅರ್ಜಿಯ ಅಧಿವಿಚಾರಣೆ.***– *(1) ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) 15ನೇ ಪ್ರಕರಣದ ಉಪಬಂಧಗಳನ್ನು ಅನುಸರಿಸದಿರುವ ಚುನಾವಣಾ ಅರ್ಜಿಯನ್ನು ವಜಾ ಮಾಡತಕ್ಕದ್ದು.*
>
> ***ವಿವರಣೆ.***– *ಈ ಉಪ-ಪ್ರಕರಣದಡಿ ಬರುವ ಚುನಾವಣಾ ಅರ್ಜಿಯನ್ನು ವಜಾ ಮಾಡುವ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಆದೇಶವನ್ನು 18ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಡಿ ಮಾಡಲಾದ ಆದೇಶವೆಂದು ಭಾವಿಸತಕ್ಕದ್ದು.*
>
> *(2) ಒಂದೇ ಚುನಾವಣೆಯ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚು ಚುನಾವಣಾ ಅರ್ಜಿಗಳನ್ನು ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ಸಲ್ಲಿಸಿದಲ್ಲಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಅವುಗಳನ್ನು ಪ್ರತ್ಯೇಕವಾಗಿ ಅಥವಾ ಒಂದು ಅಥವಾ ಹೆಚ್ಚು ಗುಂಪುಗಳಲ್ಲಿ ಅಧಿವಿಚಾರಿಸತಕ್ಕದ್ದು.*

*(3) ಈಗಾಗಲೇ ಪ್ರತ್ಯರ್ಜಿದಾರರಾಗಿಲ್ಲದ ಯಾರೇ ಅಭ್ಯರ್ಥಿಯು, ಅಧಿವಿಚಾರಣೆಯು ಪ್ರಾರಂಭದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ಅರ್ಜಿ ಸಲ್ಲಿಸಿದಾಗ, ಮತ್ತು ಸಿವಿಲ್ ನ್ಯಾಯಾಧೀಶರು ಮಾಡಬಹುದಾದ ವೆಚ್ಚಗಳ ಭದ್ರತೆಗೆ ಸಂಬಂಧಿಸಿದ ಯಾವುದೇ ಆದೇಶಕ್ಕೊಳಪಟ್ಟು, ಪ್ರತ್ಯರ್ಜಿದಾರನಾಗಿ ಸೇರಲು ಹಕ್ಕುಳ್ಳವನಾಗಿರತಕ್ಕದ್ದು.*

***ವಿವರಣೆ.–*** *ಈ ಪ್ರಕರಣದ ಉದ್ದೇಶಕ್ಕಾಗಿ, ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮುಂದೆ ಹಾಜರಾಗಲು ಪ್ರತ್ಯರ್ಜಿದಾರರಿಗೆ ನಿಗದಿಪಡಿಸಿದ ದಿನಾಂಕದಂದು ಅರ್ಜಿಯ ಅಧಿವಿಚಾರಣೆ ನಡೆಸಬೇಕೆಂದು ಮತ್ತು ಅರ್ಜಿಯಲ್ಲಿ ಮಾಡಲಾದ ಕ್ಲೇಮು ಅಥವಾ ಕ್ಲೇಮುಗಳಿಗೆ ಉತ್ತರಿಸಬೇಕೆಂದು ಭಾವಿಸತಕ್ಕದ್ದು.*

*(4) ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ವೆಚ್ಚಗಳಿಗೆ ಸಂಬಂಧಿಸಿ ಅಂಥ ನಿಬಂಧನೆಗಳ ಆಧಾರದ ಮೇಲೆ ಮತ್ತು ಹಾಗಿಲ್ಲದಿದ್ದರೆ, ಅವರು ಯೋಗ್ಯವೆಂದು ಭಾವಿಸಬಹುದಾದಂತೆ, ಅರ್ಜಿಯ ನ್ಯಾಯಸಮ್ಮತವಾದ ಮತ್ತು ಪರಿಣಾಮಕಾರಿಯಾದ ಅಧಿವಿಚಾರಣೆಯನ್ನು ದೃಢಪಡಿಸಲು ಅಗತ್ಯವಾಗುವ ತಮ್ಮ ಅಭಿಪ್ರಾಯದಲ್ಲಿರಬಹುದಾದ ರೀತಿಯಲ್ಲಿ ಅರ್ಜಿಯಲ್ಲಿ ಆಪಾದಿಸಲಾದ ಯಾವುದೇ ಭ್ರಷ್ಟಾಚಾರ ಪದ್ಧತಿಯ ವಿವರಗಳನ್ನು ತಿದ್ದುಪಡಿ ಮಾಡಲು ಹಾಗೂ ವಿಶದೀಕರಿಸಲು ಅನುಮತಿಸಬಹುದು. ಆದರೆ, ಅರ್ಜಿಯಲ್ಲಿ ಈ ಹಿಂದೆ ಆಪಾದಿಸಿರದ ಭ್ರಷ್ಟಾಚಾರ ಪದ್ಧತಿಯ ವಿವರಗಳನ್ನು ಪರಿಚಯಿಸುವ ಪರಿಣಾಮ ಹೊಂದಿರುವಂಥ ಅರ್ಜಿಯ ಯಾವುದೇ ತಿದ್ದುಪಡಿಗೆ ಅನುಮತಿಸತಕ್ಕದ್ದಲ್ಲ.*

*(5) ಚುನಾವಣಾ ಅರ್ಜಿಯ ಅಧಿವಿಚಾರಣೆಯನ್ನು, ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ಕಾರಣಗಳನ್ನು ದಾಖಲಿಸಲು ಅಗತ್ಯವಿರುವ ಮರುದಿನವನ್ನೂ ಮೀರಿ ಅಧಿವಿಚಾರಣೆಯನ್ನು ಮುಂದೂಡಿರುವುದು ಕಂಡುಬಂದ ಹೊರತು, ಅಧಿವಿಚಾರಣೆಗೆ ಸಂಬಂಧಿಸಿದ ನ್ಯಾಯದ ಹಿತಾಸಕ್ತಿಯೊಂದಿಗೆ ಸಮರ್ಪಕವಾಗಿ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅದರ ತೀರ್ಮಾನವಾಗುವವರೆಗೂ ಪ್ರತಿದಿನವೂ ಮುಂದುವರೆಸತಕ್ಕದ್ದು.*

*(6) ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಆ ಚುನಾವಣಾ ಅರ್ಜಿಯನ್ನು ಅಧಿವಿಚಾರಣೆಗಾಗಿ ಸಿವಿಲ್ ನ್ಯಾಯಾಧೀಶರಿಗೆ (ಕಿರಿಯ ವಿಭಾಗ) ಸಲ್ಲಿಸಲಾದ ದಿನಾಂಕದಿಂದ 6 ತಿಂಗಳುಗಳೊಳಗೆ ಅಧಿವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸತಕ್ಕದ್ದು.*

*(7) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ಚುನಾವಣಾ ಅರ್ಜಿಯನ್ನು, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ದಾವೆಗಳ ಅಧಿವಿಚಾರಣೆಗೆ ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ ಕೇಂದ್ರ ಅಧಿನಿಯಮ 5), ಅನ್ವಯಿಸಬಹುದಾದ ಕಾರ್ಯ ಪ್ರಕ್ರಿಯೆಗೆ ಅನುಸಾರವಾಗಿ, ಸಾಧ್ಯವಾದಷ್ಟು ಮಟ್ಟಿಗೆ, ಅಧಿವಿಚಾರಣೆ ಮಾಡತಕ್ಕದ್ದು:*

*ಪರಂತು, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ), ಯಾವುದೇ ಸಾಕ್ಷಿದಾರ ಅಥವಾ ಸಾಕ್ಷಿದಾರರ ಸಾಕ್ಷ್ಯವು ಅರ್ಜಿಯನ್ನು ತೀರ್ಮಾನಿಸಲು ಸಾಕ್ಷ್ಯಾಧಾರವಾಗಿಲ್ಲವೆಂಬ ಅಥವಾ ಅಂಥ ಸಾಕ್ಷಿ ಅಥವಾ ಸಾಕ್ಷಿಗಳನ್ನು ಕೊಡುವ ಪಕ್ಷಕಾರನು ಕ್ಷುಲ್ಲಕ*

*ಕಾರಣಗಳಿಗಾಗಿ ಅಥವಾ ವ್ಯವಹರಣೆಗಳನ್ನು ವಿಳಂಬಗೊಳಿಸುವ ದೃಷ್ಟಿಯಿಂದ ಆ ರೀತಿ ಮಾಡುತ್ತಿದ್ದಾನೆಂಬ ಅಭಿಪ್ರಾಯ ಹೊಂದಿದ್ದಲ್ಲಿ, ಅವರು ಯಾರೇ ಸಾಕ್ಷಿ ಅಥವಾ ಸಾಕ್ಷಿಗಳನ್ನು ವಿಚಾರಣೆ ಮಾಡಲು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ನಿರಾಕರಿಸಲು ವಿವೇಚನೆಯನ್ನು ಹೊಂದಿರತಕ್ಕದ್ದು.*

*(8) ಭಾರತ ಸಾಕ್ಷ್ಯ ಅಧಿನಿಯಮ, 1872ರ ಉಪಬಂಧಗಳು ಚುನಾವಣಾ ಅರ್ಜಿಯ ಅಧಿವಿಚಾರಣೆಗೆ ಎಲ್ಲಾ ರೀತಿಯಲ್ಲಿಯೂ ಅನ್ವಯವಾಗುತ್ತದೆಯೆಂದು ಭಾವಿಸಲಾಗುವ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು.*

*(9) ಇದಕ್ಕೆ ವಿರುದ್ಧವಾಗಿ ಯಾವುದೇ ಅಧಿನಿಯಮಿತಿಯಲ್ಲಿ ಏನೇ ಒಳಗೊಂಡಿದ್ದರೂ, ಇದಕ್ಕೆ ಯುಕ್ತವಾಗಿ ಸ್ಟ್ಯಾಂಪು ಹಚ್ಚಿಲ್ಲ ಅಥವಾ ನೋಂದಾಯಿಸಿಲ್ಲವೆಂಬ ಕಾರಣದ ಮೇಲೆ ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿ ಸಾಕ್ಷ್ಯವನ್ನಾಗಿ ಯಾವುದೇ ದಸ್ತಾವೇಜನ್ನು ಅಂಗೀಕರಿಸತಕ್ಕದ್ದಲ್ಲ.*

10. ಸದರಿ ಉಪಬಂಧದ ಬರಿಯ ಅವಗಾಹನೆಯಿಂದಲೇ ಅದು "ಚುನಾವಣಾ ಅರ್ಜಿಯ ಅಧಿವಿಚಾರಣೆ"ಯ ಬಗ್ಗೆ ವ್ಯವಹರಿಸುತ್ತದೆಯೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಉಪಬಂಧವು ಕೆಲವು ಕಾರ್ಯಪ್ರಕ್ರಿಯೆಗಳನ್ನು ಪರಿಭಾಷಿಸುತ್ತದೆ ಮತ್ತು ಎಲ್ಲಾ ಅಧಿಕಾರಗಳನ್ನು ನ್ಯಾಯಾಲಯದಲ್ಲಿ ನಿಹಿತಗೊಳಿಸಲಾಗಿದೆ. ಆದರೆ ಕಾರ್ಯಪ್ರಕ್ರಿಯೆಗಳನ್ನು ಪರಿಭಾಷಿಸುವಾಗ, ಈ ಉಪಬಂಧವು ಸಂಹಿತೆಗಿಂತ ಭಿನ್ನವಾಗಿರುತ್ತದೆ. ಉಪ-ಪ್ರಕರಣ (3)ಕ್ಕೆ ಸಹಬಂಧಿಸಲಾದ ವಿವರಣೆಯು, ಪ್ರತ್ಯರ್ಜಿದಾರರು ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಅರ್ಜಿಯಲ್ಲಿ ಮಾಡಲಾದ ಕ್ಲೇಮು ಅಥವಾ ಕ್ಲೇಮುಗಳನ್ನು ಉತ್ತರಿಸಲು ನಿಗದಿಪಡಿಸಲಾದ ದಿನಾಂಕದಂದು ಅರ್ಜಿಯ ಅಧಿವಿಚಾರಣೆಯನ್ನು ಪ್ರಾರಂಭಿಸಬೇಕೆಂದು

ಭಾವಿಸತಕ್ಕದ್ದೆಂದು ಸ್ಪಷ್ಟವಾಗಿ ಹೇಳುತ್ತದೆ. ವಿವಾದಾಂಶಗಳನ್ನು ರೂಪಿಸಿದಾಗ ಒಂದು ಸಿವಿಲ್ ದಾವೆಯ ಅಧಿವಿಚಾರಣೆಯನ್ನು ಪ್ರಾರಂಭಿಸಬೇಕೇ ಹೊರತು ಪ್ರತ್ಯರ್ಜಿದಾರರು ಹಾಜರಾದಾಗ ಅಲ್ಲ ಎಂದು ಹೇಳಲಾಗಿರುವ ಕಾರಣ, ಈ ಉಪಬಂಧವು ಸಿವಿಲ್ ದಾವೆಗೆ ಅನ್ವಯಿಸಬಹುದಾದ ಸಹಜ ನಿಯಮದಿಂದ ಸ್ಪಷ್ಟವಾಗಿ ಬೇರೆಯಾಗುತ್ತದೆ.

11. ಅತ್ಯಂತ ಮುಖ್ಯವಾಗಿ, ಚುನಾವಣಾ ಅರ್ಜಿಯನ್ನು "ದಾವೆಗಳ ಅಧಿವಿಚಾರಣೆಗೆ, ಸಾಧ್ಯವಾದಷ್ಟುಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಅನ್ವಯಿಸಬಹುದಾದ ಕಾರ್ಯಪ್ರಕ್ರಿಯೆಗೆ ಅನುಸಾರವಾಗಿ ಅಧಿವಿಚಾರಿಸತಕ್ಕದ್ದೆಂದು 17ನೇ ಪ್ರಕರಣದ 7ನೇ ಉಪ–ಪ್ರಕರಣವು ಸ್ಪಷ್ಟವಾಗಿ ಗೊತ್ತುಪಡಿಸುತ್ತದೆ". ಸಾಧ್ಯವಾದಷ್ಟುಮಟ್ಟಿಗೆ ಎಂಬ ಪದಬಳಕೆಯು ಚುನಾವಣಾ ಅರ್ಜಿಯ ಅಧಿವಿಚಾರಣೆಯ ಸಂದರ್ಭದಲ್ಲಿ ಇಡೀ ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಅನ್ವಯಿಸಬಾರದು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ದಾವೆಯ ಅಧಿವಿಚಾರಣೆಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಅನ್ವಯಿಸಬಹುದಾದ ಕಾರ್ಯಪ್ರಕ್ರಿಯೆಯನ್ನು ಅನ್ವಯಿಸಬೇಕಾಗುತ್ತದೆ. "ದಾವೆಯ ಅಧಿವಿಚಾರಣೆಗಾಗಿ ಕಾರ್ಯ ಪ್ರಕ್ರಿಯೆ" ಎಂಬುದು ಸಂಹಿತೆಯ 9 ರಿಂದ 33 ಪ್ರಕರಣಗಳಲ್ಲಿ ಮತ್ತು ಸಂಹಿತೆಯ 1 ರಿಂದ 20ರ ವರೆಗಿನ ಆದೇಶಗಳಲ್ಲಿ ಒಳಗೊಂಡಿದೆ. ಆದರೆ, "ದಾವೆಯ ಅಧಿವಿಚಾರಣೆಗಾಗಿನ ಕಾರ್ಯಪ್ರಕ್ರಿಯೆ"ಯನ್ನು ಒಳಗೊಳ್ಳುವುದರ ಜೊತೆಗೆ ಸಂಹಿತೆಯ ಭಾಗ–IIIರಲ್ಲಿ ಒಳಗೊಂಡಿರುವ ಪ್ರಾಸಂಗಿಕ ಕಾರ್ಯಪ್ರಕ್ರಿಯೆಗಳು ಹಾಗೂ ಸಂಹಿತೆಯ ಭಾಗ–VIರಲ್ಲಿ ಒಳಗೊಂಡಿರುವ ಪೂರಕ ಕಾರ್ಯ ಪ್ರಕ್ರಿಯೆಗಳಂಥ ಇತರ ಉಪಬಂಧಗಳನ್ನು ಸಹ ಸಂಹಿತೆಯು ಒಳಗೊಳ್ಳುತ್ತದೆ. ವಾಸ್ತವವಾಗಿ, ಸಂಹಿತೆಯ ಭಾಗ–VI ರಲ್ಲಿ ಒಳಗೊಂಡಿರುವ 94ನೇ ಪ್ರಕರಣವು ಸಿವಿಲ್ ನ್ಯಾಯಾಲಯಕ್ಕೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಅಧಿಕಾರವನ್ನು ಕೊಡುತ್ತದೆ. ಸದರಿ ಅಧಿಕಾರವನ್ನು ಸಂಹಿತೆಯ ಕ್ರಮಾದೇಶ 39, ನಿಯಮ 1 ಮತ್ತು 2ರಲ್ಲಿ ಇನ್ನಷ್ಟು ವಿಸ್ತರಿಸಲಾಗಿದೆ. ಆದುದರಿಂದ, ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವ ಅಧಿಕಾರವು ಪೂರಕ ಕಾರ್ಯಪ್ರಕ್ರಿಯೆಗಳ ಭಾಗವಾಗಿದೆ. ಇದು "ದಾವೆಯ

ಅಧಿವಿಚಾರಣೆಗಾಗಿ ಕಾರ್ಯಪ್ರಕ್ರಿಯೆ"ಯ ಭಾಗವನ್ನು ರೂಪಿಸುವುದಿಲ್ಲ. ಹೀಗಾಗಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಈ ಅಧಿನಿಯಮದ 17ನೇ ಪ್ರಕರಣದೊಂದಿಗೆ ಓದಲಾದ 15ನೇ ಪ್ರಕರಣದಡಿ ಚುನಾವಣಾ ಅರ್ಜಿಯನ್ನು ಅಧಿವಿಚಾರಣೆ ಮಾಡುವಾಗ, ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಅಧಿಕಾರವನ್ನು ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಇವರಲ್ಲಿ ನಿಹಿತಗೊಳಿಸಿರುವುದಿಲ್ಲ.

12. ಹಾಗಾಗಿಯೇ, 5ನೇ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಶ್ಯಾಮ್ ಕೌಂಡಿನ್ಯರವರು ಸಂಹಿತೆಯ ಉಪಬಂಧಗಳು ಚುನಾವಣಾ ಅರ್ಜಿಗೆ ಅನ್ವಯವಾಗುತ್ತವೆ ಎಂದು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ***ಸಾಥಿ ವಿಜಯಕುಮಾರ್*** (ಮೇಲೆ ಹೇಳಿದ) ಮತ್ತು ***ರಾಮ್ ಸುಖ್*** (ಮೇಲೆ ಹೇಳಿದ) ಪ್ರಕರಣಗಳ ಮೇಲೆ ಅವಲಂಬಿತರಾಗಿದ್ದಾರೆ. ಹಾಗಿದ್ದರೂ, ವಾದ–ವಿವಾದ ಪತ್ರಗಳನ್ನು ಹೊಡೆದುಹಾಕಲು ಸಂಹಿತೆಯ 16ನೇ ನಿಯಮ, 6ನೇ ಕ್ರಮಾದೇಶದಡಿ ಅಧಿಕಾರವು ಸಿವಿಲ್ ನ್ಯಾಯಾಧೀಶರಲ್ಲಿ, ಚುನಾವಣಾ ಅರ್ಜಿಯನ್ನು ಅಧಿವಿಚಾರಿಸುವಾಗ ನಿಹಿತವಾಗಿರುತ್ತದೆಯೆ? ಅಥವಾ ಇಲ್ಲವೇ? ಎಂಬುದು ***ಸಾಥಿ ವಿಜಯ್‌ಕುಮಾರ್*** (ಮೇಲೆ ಹೇಳಿದ) ಪ್ರಕರಣದಲ್ಲಿನ ವಿವಾದಾಂಶವಾಗಿದೆ. ಸ್ಪಷ್ಟವಾಗಿ, ಸದರಿ ಅಧಿಕಾರವು ಸಿವಿಲ್ ದಾವೆಯ ಅಧಿವಿಚಾರಣೆಗಾಗಿ ಇರುವ ‘‘ಕಾರ್ಯಪ್ರಕ್ರಿಯೆ’’ಯೊಂದಿಗೆ ವ್ಯವಹರಿಸುತ್ತದೆ. ಈ ಹಿನ್ನೆಲೆಯಲ್ಲಿ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ವಾದವಿವಾದ ಪತ್ರಗಳನ್ನು ವಜಾ ಮಾಡಲು ಉಪಬಂಧವನ್ನು ಮಾಡಿರುವುದಿಲ್ಲವಾದರೂ ಸಿವಿಲ್ ದಾವೆಯಲ್ಲಿನ ವಾದವಿವಾದ ಪತ್ರಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ನಿಯಮಗಳಾಗಿ ಅವು ಚುನಾವಣಾ ಅರ್ಜಿಗೆ ಅನ್ವಯಯೋಗ್ಯವಾಗಿವೆ. ಹೀಗಾಗಿ, ವಾದಪ್ರತಿವಾದ ಪತ್ರಗಳನ್ನು ಹೊಡೆದುಹಾಕಲು ಸಂಹಿತೆಯ ಕ್ರಮಾದೇಶ 6, ನಿಯಮ 16ರಡಿ ನ್ಯಾಯಾಲಯವು ಅಧಿಕಾರವನ್ನು ಹೊಂದಿರುತ್ತದೆ. ಇಲ್ಲಿ ವಿವಾದಾಂಶವು ಸ್ಪಷ್ಟವಾಗಿ ‘‘ದಾವೆಯ ಅಧಿವಿಚಾರಣೆಗಾಗಿ ಕಾರ್ಯಪ್ರಕ್ರಿಯೆ’’ಗೆ ಸಂಬಂಧಿಸಿರುತ್ತದೆ. ಹಾಗಿದ್ದರೂ, ಮೇಲೆ ಚರ್ಚಿಸಲಾದಂತೆ, ನಿರ್ಬಂಧಕಾಜ್ಞೆಯುನ್ನು ವಿಧಿಸುವ ಅಧಿಕಾರವು

ಪೂರಕವಾದದ್ದಾಗಿದೆಯೇ ಹೊರತು ಅದು "ದಾವೆಯ ಅಧಿವಿಚಾರಣೆಗಾಗಿ ಕಾರ್ಯಪ್ರಕ್ರಿಯೆ"ಯ ಭಾಗವಾಗಿಲ್ಲ. ಆದ್ದರಿಂದ, ಸಾಥಿ ವಿಜಯ್ ಕುಮಾರ್ (ಮೇಲೆ ಹೇಳಿದ) ಪ್ರಕರಣವು 5ನೇ ಪ್ರತ್ಯರ್ಜಿದಾರರ ಪ್ರಕರಣವನ್ನು ಸಮರ್ಥಿಸುವುದಿಲ್ಲ.

13. ಅದೇ ರೀತಿಯಲ್ಲಿ, **ರಾಮ್ ಸುಖ್** (ಮೇಲೆ ಹೇಳಿದ) ಪ್ರಕರಣದಲ್ಲಿ, ವಿವಾದಾಂಶವು, ಚುನಾವಣಾ ಅರ್ಜಿಯನ್ನು ಅಧಿವಿಚಾರಣೆ ಮಾಡುತ್ತಿರುವ ಸಿವಿಲ್ ನ್ಯಾಯಾಲಯವು ಸಂಹಿತೆಯ ಕ್ರಮಾದೇಶ 6, ನಿಯಮ 16 ರಡಿ ಮತ್ತು ಕ್ರಮಾದೇಶ 7, ನಿಯಮ 11ರಡಿಯಲ್ಲಿನ ಅಧಿಕಾರಗಳನ್ನು ಹೊಂದಿದೆಯೇ? ಎಂಬುದಾಗಿರುತ್ತದೆ. ಈ ಎರಡೂ ಆದೇಶಗಳು "ಸಿವಿಲ್ ದಾವೆಯನ್ನು ಅಧಿವಿಚಾರಣೆ ಮಾಡುವುದಕ್ಕಾಗಿ ಇರುವ ಪ್ರಕ್ರಿಯಾತ್ಮಕ ಅಂಶಗಳೊಂದಿಗೆ" ವ್ಯವಹರಿಸುವುದರಿಂದಾಗಿ, ಸಿವಿಲ್ ನ್ಯಾಯಾಲಯವು ಈ ಎರಡೂ ಆದೇಶಗಳಡಿ ತನ್ನ ಅಧಿಕಾರಗಳನ್ನು ಚಲಾಯಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆಯೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

14. ಇದಲ್ಲದೆ, ಚುನಾಯಿತ ವ್ಯಕ್ತಿಯನ್ನು, ಆತನಿಗೆ ವಹಿಸಲಾದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸುವುದರಿಂದ ನಿಷೇಧಿಸುವ ಮುಂಚೆ ಮಾನ್ಯ ಸಿವಿಲ್ ನ್ಯಾಯಾಧೀಶರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಿಧಿಸುವುದರ ಪರಿಣಾಮಗಳನ್ನು ಸಹ ಪರಿಗಣಿಸತಕ್ಕದ್ದು: ಸದಸ್ಯನು/ಳು ತನ್ನ ಅಧಿಕಾರಗಳನ್ನು ಚಲಾಯಿಸುವ ಹಕ್ಕನ್ನು ಒಮ್ಮೆ ನಿರಾಕರಿಸಿದರೆ, ಆತ/ಆಕೆ ಪ್ರತಿನಿಧಿಸುವ ಚುನಾವಣಾ ಕ್ಷೇತ್ರವು ಗ್ರಾಮಪಂಚಾಯಿತಿಯ ಕೆಲಸಕಾರ್ಯಗಳಲ್ಲಿ ತನ್ನ ಧ್ವನಿಯನ್ನು ಕಳೆದುಕೊಳ್ಳುತ್ತದೆ. ಸದ್ಯದ ಪ್ರಕರಣದಲ್ಲಿ, ಗ್ರಾಮಪಂಚಾಯತಿಯ ಅಧ್ಯಕ್ಷ ಸ್ಥಾನಕ್ಕಾಗಿ ಮುಂಬರುವ ಚುನಾವಣೆಯಲ್ಲಿ ಅರ್ಜಿದಾರಳ ಮತ ಚಲಾಯಿಸುವ ಹಕ್ಕನ್ನು ನಿರಾಕರಿಸುವ ಮೂಲಕ, ಮಾನ್ಯ ಸಿವಿಲ್ ನ್ಯಾಯಾಧೀಶರು ಗ್ರಾಮಪಂಚಾಯತಿಯ ಅಧ್ಯಕ್ಷರನ್ನು ಆಯ್ಕೆ ಮಾಡುವ, ಆಕೆಯ ಚುನಾವಣಾ ಕ್ಷೇತ್ರವನ್ನು ನಿರಾಕರಿಸಿದ್ದಾರೆ. ಪ್ರಕರಣಗಳ ಸರಣಿಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಚುನಾಯಿತ ಸಂಸ್ಥೆಯ ಯುಕ್ತವಾಗಿ ಚುನಾಯಿತರಾದ ಸದಸ್ಯರಿಗೆ ಚುನಾಯಿತ ಸದಸ್ಯರಾಗಿ

ತಮ್ಮ ಅಧಿಕಾರಗಳನ್ನು ಚಲಾಯಿಸಲು ಮತ್ತು ತಮ್ಮ ಕರ್ತವ್ಯಗಳನ್ನು ಪಾಲಿಸಲು ಇರುವ ಹಕ್ಕನ್ನು ನಿರಾಕರಿಸತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟಿರುವುದು ಈ ಕಾರಣಕ್ಕಾಗಿಯೇ ಆಗಿದೆ. ಪ್ರಜಾಪ್ರಭುತ್ವದಲ್ಲಿ, ಆತ/ಆಕೆ ಜನರ ಧ್ವನಿಯಾಗಿದ್ದಾರೆ. ಅವರು/ಅವಳು ಜನರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಾರೆ. ಹೀಗಾಗಿ, ನ್ಯಾಯಾಲಯಗಳು ಚುನಾವಣಾ ಅರ್ಜಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಾಗ ಉತ್ಕಟತೆಯಿಂದಿರಬೇಕು.

15. ಹಾಗಿದ್ದರೂ, ಮಾನ್ಯ ಹಿರಿಯ ವಕೀಲರಿಂದ ಮಂಡಿಸಲಾದಂತೆ ಅಧಿನಿಯಮದ 291ನೇ ಪ್ರಕರಣದ ಅನ್ವಯಿಸುವಿಕೆಗೆ ಸಂಬಂಧಿಸಿದ ವಾದವು ಸ್ವಲ್ಪ ಅತಿಯಾಗಿದೆ. ಅಧಿನಿಯಮದ 291ನೇ ಪ್ರಕರಣವು ಈ ಕೆಳಗಿನಂತಿದೆ:

> ***291. ಚುನಾವಣಾ ವ್ಯವಹರಣೆಗಳಲ್ಲಿ ನಿರ್ಬಂಧಕಾಜ್ಞೆಗಳನ್ನು ವಿಧಿಸಕೂಡದು.–*** *ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದಡಿ ಯಾವುದೇ ಚುನಾವಣೆಯನ್ನು ನಡೆಸುವುದಕ್ಕೆ ಈ ಅಧಿನಿಯಮದಡಿ ಕೈಗೊಳ್ಳಲಾದ ಅಥವಾ ಕೈಗೊಳ್ಳಲಿರುವ ಯಾವುದೇ ವ್ಯವಹರಣೆಯನ್ನು ನಿರ್ಬಂಧಿಸುವ ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ಮಧ್ಯಕಾಲೀನ ಆದೇಶವನ್ನು ನ್ಯಾಯಾಲಯವೂ ಹೊರಡಿಸತಕ್ಕದ್ದಲ್ಲ.*

16. ಉಪಬಂಧವು ''ಏನೇ ಇದ್ದರೂ'' ಎಂಬ ಖಂಡದೊಂದಿಗೆ ಪ್ರಾರಂಭವಾಗುವುದರಿಂದ, ತತ್ಕಾಲದಲ್ಲಿ ಜಾರಿಯಲ್ಲಿರುವ ಎಲ್ಲಾ ಕಾನೂನುಗಳ ಅನ್ವಯಿಸುವಿಕೆಯನ್ನು ಇದು ಸ್ಪಷ್ಟವಾಗಿ ಇಲ್ಲದಂತೆ ಮಾಡುತ್ತದೆ. ಇದು ಪ್ರಕರಣ 94ರಡಿ ಮತ್ತು ಸಂಹಿತೆಯ ಕ್ರಮಾದೇಶ 39, ನಿಯಮ 1 ಹಾಗೂ 2ರಡಿ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಸಹ ಒಳಗೊಳ್ಳುತ್ತದೆ. ಆದಾಗ್ಯೂ, ಉಪಬಂಧವು

"ಅಧಿನಿಯಮದಡಿ ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿನ ಯಾವುದೇ ವ್ಯವಹರಣೆಯನ್ನು ನಿಗ್ರಹಿಸುವ" ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವುದರಿಂದ ಅಥವಾ ಮಧ್ಯಕಾಲೀನ ಆದೇಶವನ್ನು ಹೊರಡಿಸುವುದರಿಂದ ನ್ಯಾಯಾಲಯವನ್ನು ನಿಷೇಧಿಸುತ್ತದೆ. ಹಾಗಿದ್ದರೂ, ಸದ್ಯದ ಪ್ರಕರಣದಲ್ಲಿ, ಅಧಿನಿಯಮದಡಿ ಅಧ್ಯಕ್ಷರ ಚುನಾವಣೆಯನ್ನು ನಡೆಸಲು ಮಾನ್ಯ ಸಿವಿಲ್ ನ್ಯಾಯಾಧೀಶರು ಯಾವುದೇ ವ್ಯವಹರಣೆಯನ್ನು ನಿಗ್ರಹಿಸಿಲ್ಲ. ಮಾನ್ಯ ಸಿವಿಲ್ ನ್ಯಾಯಾಧೀಶರು ಗ್ರಾಮಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುವುದರಿಂದ ಮಾತ್ರ ಅರ್ಜಿದಾರನನ್ನು ನಿಗ್ರಹಿಸಿದ್ದಾರೆ. ಆದುದರಿಂದ, ಮಾನ್ಯ ಸಿವಿಲ್ ನ್ಯಾಯಾಧೀಶರು ಅಧಿನಿಯಮದ 291ನೇ ಪ್ರಕರಣದಲ್ಲಿ ಒಳಗೊಂಡಿರುವ ನಿಷೇಧವನ್ನು ಉಲ್ಲಂಘಿಸಿದ್ದಾರೆ ಎಂಬ ಮಾನ್ಯ ಹಿರಿಯ ವಕೀಲರ ವಾದವನ್ನು ಅಂಗೀಕರಿಸಲಾಗದು.

17. ಆದಾಗ್ಯೂ, ಮಾನ್ಯ ಸಿವಿಲ್ ನ್ಯಾಯಾಧೀಶರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿಲ್ಲವಾದ್ದರಿಂದ, ಪ್ರಶ್ನಿತ ಆದೇಶವು ಅವರ ಅಧಿಕಾರವ್ಯಾಪ್ತಿಗೆ ಮೀರಿದ್ದಾಗಿದೆ. ಹೀಗಾಗಿ, ಪ್ರಶ್ನಿತ ಆದೇಶವು ಪ್ರಾರಂಭದಿಂದಲೇ ಶೂನ್ಯವಾದದ್ದಾಗಿದೆ. ಆದುದರಿಂದ, ದಿನಾಂಕ: 7.7.2015ರ ಪ್ರಶ್ನಿತ ಆದೇಶವನ್ನು ರದ್ದುಮಾಡಲಾಗಿದೆ. ರಿಟ್ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ವೆಚ್ಚಗಳಿಗೆ ಯಾವುದೇ ಆದೇಶವಿಲ್ಲ.

---